# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| **ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ** | **860** |
| **ಮಾನ್ಯ ಸದಸ್ಯರ ಹೆಸರು** | **ಶ್ರೀ ಸುನೀಲ್ ವಲ್ಯಾಪುರ್**<br>**(ವಿಧಾನಸಭೆಯಿಂದ ಚುನಾಯಿತರಾದವರು)** |
| **ಉತ್ತರಿಸಬೇಕಾದ ದಿನಾಂಕ** | **22/02/2024** |
| **ಉತ್ತರಿಸುವವರು** | **ಮಾನ್ಯ ಕಾರ್ಮಿಕ ಸಚಿವರು** |

<table>
<tr><th>ಕ್ರ. ಸಂ.</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ಕಲಬುರಗಿ ಜಿಲ್ಲೆಯಲ್ಲಿ ಕಾರ್ಮಿಕ ಇಲಾಖೆಯಿಂದ ಎಷ್ಟು ಕಾರ್ಮಿಕರಿಗೆ ಗುರುತಿನ ಚೀಟಿ ನೀಡಲಾಗಿದೆ; (ಸಂಘಟಿತ ಮತ್ತು ಅಸಂಘಟಿತ ಕಾರ್ಮಿಕರ ಗುರುತಿನ ಚೀಟಿವಾರು ವಿವರ ನೀಡುವುದು);</td><td>ಕಲಬುರಗಿ ಜಿಲ್ಲೆಗೆ ಸಂಬಂಧಿಸಿದಂತೆ, ಕಾರ್ಮಿಕ ಇಲಾಖೆಯ ಅಧೀನದಲ್ಲಿ ಕಾರ್ಯ ನಿರ್ವಹಿಸುತ್ತಿರುವ ವಿವಿಧ ಮಂಡಳಿಗಳ ಮೂಲಕ ಜಾರಿಗೊಳಿಸುತ್ತಿರುವ ವಿವಿಧ ಯೋಜನೆಗಳಡಿ ಫಲಾನುಭವಿಗಳಾಗಿ ನೋಂದಾಯಿತರಾದ ಕಾರ್ಮಿಕರಿಗೆ ಗುರುತಿನ ಚೀಟಿ ನೀಡಲಾಗಿದ್ದು, ವಿವರ ಈ ಕೆಳಕಂಡಂತಿದೆ.<br><br>ಕರ್ನಾಟಕ ರಾಜ್ಯ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ:<br>ಈ ಮಂಡಳಿಯಲ್ಲಿ ಕಲಬುರಗಿ ಜಿಲ್ಲೆಗೆ ಸಂಬಂಧಿಸಿದಂತೆ ಒಟ್ಟು 3,77,670 ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರು ಫಲಾನುಭವಿಗಳಾಗಿ ನೋಂದಣಿಯಾಗಿರುತ್ತಾರೆ. ಅವರಿಗೆ ಗುರುತಿನ ಚೀಟಿ ನೀಡಲಾಗಿರುತ್ತದೆ.<br><br>ಕರ್ನಾಟಕ ರಾಜ್ಯ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿ<br>ಕಾರ್ಮಿಕ ಇಲಾಖೆಯ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿರುವ, ಕರ್ನಾಟಕ ರಾಜ್ಯ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿಯು ಜಾರಿಗೊಳಿಸುತ್ತಿರುವ ವಿವಿಧ ಯೋಜನೆಗಳಡಿ ಕಲಬುರಗಿ ಜಿಲ್ಲೆಯಲ್ಲಿ ನೋಂದಣಿಯಾಗಿ ಗುರುತಿನ ಚೀಟಿ ವಿತರಿಸಿದ ಅಸಂಘಟಿತ ಕಾರ್ಮಿಕರ ವಿವರ ಈ ಕೆಳಗಿನಂತಿದೆ.<br><br>
<table>
<tr><th>ಕ್ರ. ಸಂ</th><th>ಯೋಜನೆ/ಕಾರ್ಯಕ್ರಮ</th><th>ನೋಂದಾಯಿತ ಫಲಾನುಭವಿಗಳು</th></tr>
<tr><td>01</td><td>ಅಂಬೇಡ್ಕರ್ ಕಾರ್ಮಿಕ ಸಹಾಯ ಹಸ್ತ ಯೋಜನೆ</td><td>9577</td></tr>
<tr><td>02</td><td>ಕರ್ನಾಟಕ ರಾಜ್ಯ ಗಿಗ್ ಕಾರ್ಮಿಕರ ವಿಮಾ ಯೋಜನೆ</td><td>41</td></tr>
<tr><td>03</td><td>ಕರ್ನಾಟಕ ರಾಜ್ಯ ದಿನಪತ್ರಿಕೆ ವಿತರಣಾ ಕಾರ್ಮಿಕರ ಅಪಘಾತ ಪರಿಹಾರ ಮತ್ತು ವೈದ್ಯಕೀಯ ಸೌಲಭ್ಯ ಯೋಜನೆ</td><td>125</td></tr>
<tr><td>04</td><td>ಕೇಂದ್ರ ಸರ್ಕಾರದ ಇ-ಶ್ರಮ್ ಕಾರ್ಯಕ್ರಮ</td><td>4,05,518</td></tr>
</table>
</td></tr>
</table>

ಆ) ಕಳೆದ ಮೂರು ವರ್ಷಗಳಲ್ಲಿ ಬಳಕೆಯಾದ ಕಾರ್ಮಿಕ ಕಲ್ಯಾಣ ನಿಧಿ ಎಷ್ಟು; ಎಷ್ಟು ಕಾರ್ಮಿಕರುಗಳಿಗೆ ಈ ನಿಧಿಯಿಂದ ಎಷ್ಟು ಹಣ ನೀಡಲಾಗಿದೆ; (ಕ್ಷೇತ್ರವಾರು ವಿವರ ನೀಡುವುದು;)

ಕಲಬುರಗಿ ಜಿಲ್ಲೆಗೆ ಸಂಬಂಧಿಸಿದಂತೆ, ಕಾರ್ಮಿಕ ಇಲಾಖೆಯ ಅಧೀನದಲ್ಲಿ ಬರುವ ಮಂಡಳಿಗಳಲ್ಲಿ ಕಳೆದ ಮೂರು ವರ್ಷಗಳಿಂದ ಬಳಕೆಯಾದ ಕಾರ್ಮಿಕರ ಕಲ್ಯಾಣ ನಿಧಿಯ ಮೊತ್ತದ ವಿವರ ಈ ಕೆಳಕಂಡಂತಿದೆ.

**ಕರ್ನಾಟಕ ರಾಜ್ಯ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ:**

ಈ ಮಂಡಳಿಯಿಂದ ರಾಜ್ಯದಾದ್ಯಂತ ಕಳೆದ ಮೂರು ವರ್ಷಗಳಲ್ಲಿ ವಿವಿಧ ಕಲ್ಯಾಣ ಮತ್ತು ಸಾಮಾಜಿಕ ಭದ್ರತಾ ಸೌಲಭ್ಯಗಳ ವಿತರಣೆಗಾಗಿ ಬಳಕೆಯಾದ ಕಟ್ಟಡ ಕಾರ್ಮಿಕ ಕಲ್ಯಾಣ ನಿಧಿ ಮೊತ್ತ ಹಾಗೂ ಸಹಾಯ ಧನ ಪಡೆದ ಫಲಾನುಭವಿಗಳ ವಿವರಗಳು ಈ ಕೆಳಕಂಡಂತೆ ಇರುತ್ತದೆ.

| ವರ್ಷ | ವಿವಿಧ ಸೌಲಭ್ಯ ಪಡೆದ ಕಾರ್ಮಿಕ ಸಂಖ್ಯೆ | ಮೊತ್ತ (ರೂ.ಕೋಟಿ ಗಳಲ್ಲಿ) |
|---|---|---|
| 2020-21 | 18,77,417 | 1055.10 |
| 2021-22 | 35,21,028 | 1562.39 |
| 2022-23 | 22,97,509 | 2046.93 |
| **ಒಟ್ಟು** | **76,95,954** | **4664.42** |

ಮಂಡಳಿಯು ಸೇವಾ ಸಿಂಧು ತಂತ್ರಾಂಶದಲ್ಲಿ ಈ ಹಿಂದೆ ಸೌಲಭ್ಯಗಳನ್ನು ನೀಡಲಾಗಿದ್ದು. ಸದರಿ ತಂತ್ರಾಂಶದಲ್ಲಿ ಕ್ಷೇತ್ರವಾರು ವಿವರ ನಿರ್ವಹಿಸಿರುವುದಿಲ್ಲ.

**ಕಾರ್ಮಿಕ ಕಲ್ಯಾಣ ಮಂಡಳಿ:**

ಕಲಬುರಗಿ ಜಿಲ್ಲೆಗೆ ಸಂಬಂಧಿಸಿದಂತೆ ಕಳೆದ ಮೂರು ವರ್ಷಗಳಲ್ಲಿ ಬಳಕೆಯಾದ ಕಾರ್ಮಿಕ ಕಲ್ಯಾಣ ನಿಧಿಯ ವಿವರ ಹಾಗೂ ಸದರಿ ನಿಧಿಯಿಂದ ಸಂಘಟಿತ ಕಾರ್ಮಿಕರು ಮತ್ತು ಅವರ ಅವಲಂಭಿತರಿಗೆ ಕಲ್ಯಾಣ ಯೋಜನೆಗಳಡಿ ನೀಡಲಾಗಿರುವ ಸೌಲಭ್ಯಗಳ ವಿವರ ಈ ಕೆಳಕಂಡಂತೆ ಇರುತ್ತದೆ.

| ವರ್ಷ | ಫಲಾನುಭವಿಗಳ ಸಂಖ್ಯೆ | ವಿವಿಧ ಕಲ್ಯಾಣ ಯೋಜನೆಗಳಡಿ ಫಲಾನುಭವಿಗಳಿಗೆ ಧನ ಸಹಾಯ ನೀಡಿರುವ ಮೊತ್ತ |
|---|---|---|
| 2020-21 | 11 | 61,000 |
| 2021-22 | 10 | 60,000 |
| 2022-23 | 6 | 66,000 |

| | | |
|---|---|---|
| ಇ) | ಕಲಬುರಗಿ ಜಿಲ್ಲೆಯಲ್ಲಿ ಕಾರ್ಮಿಕರ ಕಲ್ಯಾಣ ನಿಧಿಗೆ ಸಂಗ್ರಹವಾದ ಹಣ ಎಷ್ಟು; ಸಂಗ್ರಹವಾಗದಿರಲು ಕಾರಣಗಳೇನು; ಸಂಗ್ರಹವಾದ ಹಣವನ್ನು ಯಾವ ಯಾವ ಮೂಲಗಳಿಗೆ ಬಳಸಲಾಗಿದೆ? (ವಿವರ ನೀಡುವುದು) | ಕಾರ್ಮಿಕ ಇಲಾಖೆಯ ಅಧೀನದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಮಂಡಳಿಗಳಲ್ಲಿ ಕಲಬುರಗಿ ಜಿಲ್ಲೆಯಿಂದ ಕಾರ್ಮಿಕರ ಕಲ್ಯಾಣ ನಿಧಿಗೆ ಸಂಗ್ರಹವಾದ ಹಣದ ವಿವರ ಈ ಕೆಳಕಂಡಂತಿದೆ.<br><br>**ಕರ್ನಾಟಕ ರಾಜ್ಯ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ:**<br><br>ಕಲಬುರಗಿ ಜಿಲ್ಲೆಯಿಂದ ಕಳೆದ ಮೂರು ವರ್ಷಗಳಿಂದ ಮಂಡಳಿಯಲ್ಲಿ ಸಂಗ್ರಹವಾದ ಕಟ್ಟಡ ಕಾರ್ಮಿಕ ಕಲ್ಯಾಣ ನಿಧಿಯ ಮೊತ್ತ ರೂ. 17.33 ಕೋಟಿ ಆಗಿರುತ್ತದೆ.<br><br>ಸದರಿ ಮೊತ್ತವನ್ನು ನೊಂದಾಯಿತ ಕಟ್ಟಡ ಕಾರ್ಮಿಕರಿಗೆ ವಿವಿಧ ಕಲ್ಯಾಣ ಮತ್ತು ಸಾಮಾಜಿಕ ಭದ್ರತಾ ಸೌಲಭ್ಯಗಳನ್ನು ವಿತರಿಸಲು ಬಳಸಲಾಗಿದೆ. ವಿವರಗಳನ್ನು **ಅನುಬಂಧ-01** ರಲ್ಲಿ ಒದಗಿಸಲಾಗಿದೆ.<br><br>**ಕಾರ್ಮಿಕ ಕಲ್ಯಾಣ ಮಂಡಳಿ:**<br>ಕಾರ್ಮಿಕ ಕಲ್ಯಾಣ ನಿಧಿಗೆ 2022-23ನೇ ಸಾಲಿನಲ್ಲಿ ಕಲಬುರಗಿ ಜಿಲ್ಲೆಯ 147 ಸಂಸ್ಥೆಗಳ 14431 ಕಾರ್ಮಿಕರಿಂದ ರೂ. 8,65,860/- ಗಳ ವಂತಿಕೆ ಸಂಗ್ರಹವಾಗಿರುತ್ತದೆ. ಕಾರ್ಮಿಕ ಕಲ್ಯಾಣ ನಿಧಿಗೆ ಸಂಗ್ರಹವಾದ ಹಣವನ್ನು ಸಂಘಟಿತ ಕಾರ್ಮಿಕರು ಮತ್ತು ಅವರ ಅವಲಂಬಿತರಿಗೆ ಈ ಕೆಳಕಂಡ ಕಲ್ಯಾಣ ಯೋಜನೆಗಳ ಸೌಲಭ್ಯಕ್ಕೆ ಬಳಸಲಾಗುವುದು.<br><br>1) ಕಾರ್ಮಿಕರ ಮಕ್ಕಳಿಗೆ ಶೈಕ್ಷಣಿಕ ಪ್ರೋತ್ಸಾಹ ಧನ ಸಹಾಯ<br>2) ಕಾರ್ಮಿಕರಿಗೆ ವೈದ್ಯಕೀಯ ನೆರವು<br>3) ಕಾರ್ಮಿಕರಿಗೆ ಅಪಘಾತ ಧನ ಸಹಾಯ<br>4) ಮಹಿಳಾ ಕಾರ್ಮಿಕರಿಗೆ ಹೆರಿಗೆ ಭತ್ಯೆ ಸೌಲಭ್ಯ<br>5) ಮೃತ ಕಾರ್ಮಿಕನ ಅಂತ್ಯ ಸಂಸ್ಕಾರಕ್ಕೆ ಧನ ಸಹಾಯ<br>6) ವಾರ್ಷಿಕ ವೈದ್ಯಕೀಯ ತಪಾಸಣೆ ಶಿಬಿರ ಹಮ್ಮಿಕೊಳ್ಳುವ ಟ್ರೇಡ್ ಯೂನಿಯನ್/ ಸಂಸ್ಥೆಗಳಿಗೆ ಧನಸಹಾಯ<br>7) ವಾರ್ಷಿಕ ಕ್ರೀಡಾ ಕೂಟ ಹಮ್ಮಿಕೊಳ್ಳುವ ನೊಂದಾಯಿತ ಕಾರ್ಮಿಕ ಸಂಘಗಳಿಗೆ ಧನ ಸಹಾಯ<br><br>ಕಳೆದ ಮೂರು ವರ್ಷಗಳಲ್ಲಿ ಕಾರ್ಮಿಕ ಕಲ್ಯಾಣ ನಿಧಿಗೆ ಸಂಗ್ರಹವಾದ ವಂತಿಕೆ ಮೊತ್ತವನ್ನು ವೆಚ್ಚ ಮಾಡಿರುವ ವಿವರಗಳನ್ನು **ಅನುಬಂಧ-2** ರಲ್ಲಿ ಒದಗಿಸಲಾಗಿದೆ. |

**ಕಾಇ 126 ಎಲ್‌ಇಟಿ 2024**

**(ಸಂತೋಷ್ ಎಸ್ ಲಾಡ್)**
**ಕಾರ್ಮಿಕ ಸಚಿವರು**

# <u>ಅನುಬಂಧ-01</u>

## ಕಳೆದ ಮೂರು ವರ್ಷಗಳಲ್ಲಿ ಕಲಬುರಗಿ ಜಿಲ್ಲೆಗೆ ಮಂಡಳಿಯಿಂದ ವಿತರಿಸಿರುವ ವಿವಿಧ ಸೌಲಭ್ಯ/ ಫಲಾನುಭವಿಗಳ ವಿವರ

| ಕ್ರ. ಸಂ. | ಸೌಲಭ್ಯವಾರು ವಿವರ | 2021-22 | | 2022-23 | | 2023-24 | | ಒಟ್ಟು | |
|---|---|---|---|---|---|---|---|---|---|
| | | ಸೌಲಭ್ಯ ಪಡೆದ ಕಾರ್ಮಿಕರ ಸಂಖ್ಯೆ | ಮೊತ್ತ ರೂ.ಗಳಲ್ಲಿ | ಸೌಲಭ್ಯ ಪಡೆದ ಕಾರ್ಮಿಕರ ಸಂಖ್ಯೆ | ಮೊತ್ತ ರೂ.ಗಳಲ್ಲಿ | ಸೌಲಭ್ಯ ಪಡೆದ ಕಾರ್ಮಿಕರ ಸಂಖ್ಯೆ | ಮೊತ್ತ ರೂ.ಗಳಲ್ಲಿ | ಸೌಲಭ್ಯ ಪಡೆದ ಕಾರ್ಮಿಕರ ಸಂಖ್ಯೆ | ಮೊತ್ತ ರೂ.ಗಳಲ್ಲಿ |
| **ಕಾರ್ಮಿಕ ಅಧಿಕಾರಿ ಕಲಬುರಗಿ ಉಪ ವಿಭಾಗ, ಕಲಬುರಗಿ** | | | | | | | | | |
| 1 | ಶೈಕ್ಷಣಿಕ ಸಹಾಯಧನ | 6200 | 35286000 | 0 | 0 | 0 | 0 | 6200 | 35286000 |
| 2 | ಮದುವೆ ಸಹಾಯಧನ | 607 | 30350000 | 1629 | 81450000 | 803 | 44180000 | 3039 | 155980000 |
| 3 | ಪ್ರಮುಖ ವೈದ್ಯಕೀಯ ಸಹಾಯಧನ | 08 | 300280 | 11 | 383812 | 7 | 112764 | 26 | 796856 |
| 4 | ವೈದ್ಯಕೀಯ ವೆಚ್ಚ ಸಹಾಯಧನ | 12 | 422046 | 14 | 449806 | 4 | 96721 | 30 | 968573 |
| 5 | ಹೆರಿಗೆ ಸಹಾಯಧನ | 251 | 6280000 | 427 | 10810000 | 117 | 3350000 | 795 | 20440000 |
| 6 | ತಾಯಿ ಮಗು ಸಹಾಯಹಸ್ತ | 26 | 156000 | 57 | 342000 | 11 | 66000 | 94 | 564000 |
| | **ಒಟ್ಟು** | **7104** | **72794326** | **2138** | **93435618** | **942** | **47805485** | **10184** | **214035429** |
| **ಸಹಾಯಕ ಕಾರ್ಮಿಕ ಆಯುಕ್ತರು, ಕಲಬುರಗಿ ವಿಭಾಗ, ಕಲಬುರಗಿ** | | | | | | | | | |
| 7 | ಅಂತ್ಯ ಸಂಸ್ಕಾರ ಮತ್ತು ಅನುಗ್ರಹ ರಾಶಿ | 1230 | 66420000 | 1211 | 45591000 | 1125 | 79650000 | 3566 | 191661000 |
| 8 | ಅಫಘಾತ/ ಮರಣ ಪರಿಹಾರ | 07 | 2900000 | 12 | 5200000 | 25 | 12500000 | 44 | 20600000 |
| 9 | ಪಿಂಚಣಿ | 168 | 3333000 | 247 | 9139000 | 194 | 6984000 | 609 | 19456000 |
| 10 | ದುರ್ಬಲತೆ ಪಿಂಚಣಿ | 04 | 112000 | 07 | 598000 | 8 | 192000 | 19 | 902000 |
| 11 | ಕುಟುಂಬ ಪಿಂಚಣಿ | 01 | 9000 | 01 | 14000 | 1 | 18000 | 3 | 41000 |
| | **ಒಟ್ಟು** | **1410** | **72774000** | **1478** | **60542000** | **1353** | **99344000** | **4241** | **232660000** |
| **ಒಟ್ಟಾರೆ** | | **8514** | **14,55,68,326** | **3616** | **15,39,77,618** | **2295** | **14,71,49,485** | **14425** | **44,66,95,429** |

# <u>ಅನುಬಂಧ-02</u>

## ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ ಶ್ರೀ ಸುನೀಲ್ ವಲ್ಯಾಪುರ್ (ವಿಧಾನಸಭೆಯಿಂದ ಚುನಾಯಿತರಾದವರು) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ. 860

**ಕರ್ನಾಟಕ ಕಾರ್ಮಿಕ ಕಲ್ಯಾಣ ಮಂಡಳಿಯಲ್ಲಿ ಕಳೆದ ಮೂರು ವರ್ಷಗಳಲ್ಲಿ ಕಾರ್ಮಿಕ ಕಲ್ಯಾಣ ನಿಧಿಗೆ ಸಂಗ್ರಹವಾದ ವಂತಿಕೆ ಮೊತ್ತವನ್ನು ವೆಚ್ಚ ಮಾಡಿರುವ ವಿವರಗಳು**

| ಕ್ರ.,ಸಂ | ವರ್ಷ | ಸಿಬ್ಬಂದಿ ವೇತನ ಭತ್ಯೆಗಳು | ನಿವೃತ್ತಿ ವೇತನ | ಸಾಮಾನ್ಯ ವೆಚ್ಚ | ಮಂಡಳಿ ನಿರ್ವಹಣೆ ಮತ್ತು ಉಪಕರಣಗಳ ವೆಚ್ಚ | ಮಂಡಳಿ ಆಸ್ತಿ ಅಭಿವೃದ್ಧಿ ವೆಚ್ಚ | ಕಾರ್ಮಿಕರ ಕಲ್ಯಾಣ ಯೋಜನೆಗಳು | ಒಟ್ಟು ಮೊತ್ತ |
|---|---|---|---|---|---|---|---|---|
| 1 | 2020-21 | 46181015 | 9311763 | 11163870 | 3502426 | 528258 | 62816000 | 133503332 |
| 2 | 2021-22 | 49036703 | 11822088 | 14612351 | 3634151 | 25131899 | 50151000 | 154388192 |
| 3 | 2022-23 | 40072184 | 13929108 | 14437431 | 2341509 | 326112550 | 134047381 | 530940163 |
| | ಒಟ್ಟು ಮೊತ್ತ | **135289902** | **35062959** | **40213652** | **9478086** | **351772707** | **247014381** | **818831687** |